## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 579 |
| ಸದಸ್ಯರ ಹೆಸರು | : | ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.12.2024. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ದಿನಾಂಕ:22.01.2009 ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗಳನ್ನು ತುಂಬಲು ಸಚಿವ ಸಂಪುಟ ನಿರ್ಣಯ ಕೈಗೊಂಡಿದೆಯೇ: | ಹೌದು. |
| (ಆ) | ಸರ್ಕಾರದ ಆದೇಶ ಸಂ.ಗ್ರಾಅಪ 569 ಗ್ರಾಪಂಅ 2006 ದಿನಾಂಕ:31.03.2008. ಹಾಗೂ ಸಚಿವ ಸಂಪುಟದ ನಿರ್ಣಯದಂತೆ 2010-11ನೇ ಸಾಲಿನಲ್ಲಿ ಬಡ್ತಿ ಕೋಟಾದಲ್ಲಿ ಒಟ್ಟು ಎಷ್ಟು ಹುದ್ದೆಗಳನ್ನು ತುಂಬಲು ನಿರ್ಣಯಿಸಲಾಗಿದ್ದು; (ಜಿಲ್ಲಾವಾರು ಬಡ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 569 ಗ್ರಾಪಂಅ 2006 ದಿನಾಂಕ:31.03.2008ರಂತೆ 5628 ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು ಸೃಜಿಸಲಾಗಿದ್ದು, ಈ ಹುದ್ದೆಗಳನ್ನು ವರ್ಷಕ್ಕೆ ತಲಾ 1/3 ಭಾಗದಂತೆ ಮುಂದಿನ 3 ವರ್ಷಗಳಲ್ಲಿ ನಿಯಮಾನುಸಾರ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.<br><br>ಅದರಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 316 ಗ್ರಾಪಂಕಾ 2009, ದಿನಾಂಕ:04.03.2010 ರ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2009ರಲ್ಲಿ ನಿರ್ದಿಷ್ಟಪಡಿಸಿರುವಂತೆ ನೇರ ನೇಮಕಾತಿಗೆ 67% ರಷ್ಟು ಹುದ್ದೆಗಳನ್ನು ಬಡ್ತಿಗಾಗಿ 33%ರಷ್ಟು ಹುದ್ದೆಗಳನ್ನು ಈ ಕೆಳಕಂಡ ವಿಧಾನಗಳಲ್ಲಿ ಭರ್ತಿ ಮಾಡಲು ಅವಕಾಶ ಕಲ್ಪಿಸಿದಂತೆ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.<br><br>**ಶೇಕಡಾ ಮೂವತ್ತಮೂರರಷ್ಟು ಹುದ್ದೆಗಳು**<br><br>i) ವಿಸ್ತರಣಾಧಿಕಾರಿ (ಪಂಚಾಯಿತಿ) ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 43ರ ಅನುಸಾರ ಒಂದು ಬಾರಿಯ ಕ್ರಮವಾಗಿ ಬಡ್ತಿ ಕೋಟಾದ ಎದುರಿಗೆ ವಿಲೀನಗೊಳಿಸುವ ಮೂಲಕ ಅಂತಹ ಸಂದರ್ಭದಲ್ಲಿ ವಿಸ್ತರಣಾಧಿಕಾರಿ (ಪಂಚಾಯಿತಿ) ವೃಂದ ರದ್ದುಗೊಳಿಸತಕ್ಕದ್ದು: ಮತ್ತು<br><br>ii) ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹಾಗೂ ಗ್ರಾಮೀಣ ಅಭಿವೃದ್ಧಿ ಸಹಾಯಕ (ಗ್ರೇಡ್-1) ವೃಂದದಿಂದ ಬಡ್ತಿ ಮೂಲಕ. |

| | | |
|---|---|---|
| (ಇ) | 2008-2009 ಹಾಗೂ 2009-2010ನೇ ವರ್ಷಗಳಿಗೆ ನಿಗದಿಪಡಿಸಿದ ಬಡ್ತಿ ಹುದ್ದೆಗಳನ್ನು ಒಗ್ಗೂಡಿಸಿ ಎಷ್ಟು ಬಡ್ತಿಗಳನ್ನು ನೀಡಲು ನಿರ್ಣಯಿಸಲಾಗಿತ್ತು; 2010-2011ನೇ ಸಾಲಿಗೆ ಬಡ್ತಿಗಾಗಿ ಮೀಸಲಿರಿಸಿದ ಹುದ್ದೆಗಳಲ್ಲಿ ಮೇಲಿನ ಸರ್ಕಾರದ ನಿರ್ಣಯಗಳ ವಿರುದ್ಧವಾಗಿ 2009-2010 ರಲ್ಲಿಯೇ ಎಷ್ಟು ಜಿಲ್ಲೆಗಳಲ್ಲಿ ಮುಂಗಡವಾಗಿ ಅಕ್ರಮ ಬಡ್ತಿ ಮಾಡಲಾಗಿದೆ; (ಜಿಲ್ಲಾವಾರು ಅಕ್ರಮ ಬಡ್ತಿ ಹೊಂದಿದವರ ಪಟ್ಟಿ ನೀಡುವುದು) | ಮುಂಬಡ್ತಿಯ ಪ್ರತಿಯೊಂದು ಸಂದರ್ಭದಲ್ಲಿ ಆಯಾಯ ನೇಮಕಾತಿ ಪ್ರಾಧಿಕಾರವು ನಿಗದಿತ ಮುಂಬಡ್ತಿ ಕೋಟಾದನ್ವಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆಸ್ಪದವಿರುತ್ತದೆ. |
| (ಈ) | ಗ್ರೇಡ್-1 ಕಾರ್ಯದರ್ಶಿಗಳಿಗೆ ಬಡ್ತಿ ನೀಡುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ /115/ಗ್ರಾಪಂಕಾ/2008, ದಿನಾಂಕ:11-03-2010 ರ ಪೂರ್ವದಲ್ಲಿಯೇ ಎಷ್ಟು ಜಿಲ್ಲೆಗಳಲ್ಲಿ ಗ್ರೇಡ್-1 ಕಾರ್ಯದರ್ಶಿ ಹುದ್ದೆಯಿಂದ ಪಿ.ಡಿ.ಓ. ಹುದ್ದೆಗೆ ಬಡ್ತಿ ನೀಡಲಾಗಿದೆ; ಈ ರೀತಿ ಬಡ್ತಿ ನೀಡಿರುವುದು ಸರಿಯಾದ ಕ್ರಮವೇ; (ಜಿಲ್ಲಾವಾರು ಬಡ್ತಿ ಹೊಂದಿದವರ ಪಟ್ಟಿ ನೀಡುವುದು) | ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 316 ಗ್ರಾಪಂಕಾ 2009, ದಿನಾಂಕ:04-03-2010 ರ ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2009 ರಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದಕ್ಕೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿದ್ದು, ಸದರಿ ನಿಯಮಗಳು ದಿನಾಂಕ:06-03-2010 ರಲ್ಲಿ ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಅಂದಿನಿಂದ ಜಾರಿಗೆ ಬಂದಿರುತ್ತದೆ.<br><br>ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದಕ್ಕೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ನೇಮಕಾತಿ ಪ್ರಾಧಿಕಾರ ವಾಗಿರುವುರಿಂದ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಮುಂಬಡ್ತಿ ಕೋಟಾದನ್ವಯ ನಿಗಧಿಪಡಿಸಲಾದ ಶೇ.33ರ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-1) ವೃಂದದ ನೌಕರರಿಂದ ಭರ್ತಿ ಮಾಡಲು ಅವಕಾಶವಿರುತ್ತದೆ. ಈ ರೀತಿ ಬಡ್ತಿ ನೀಡಿರುವುದು ಸರಿಯಾದ ಕ್ರಮವಾಗಿದೆ. |
| (ಉ) | ಈ ಅಕ್ರಮ ಬಡ್ತಿಗಳ ತನಿಖೆ ನಡೆಸುವಂತೆ ಇಲಾಖೆಯ ಆಯುಕ್ತರಿಗೆ ದಿನಾಂಕ:08-02-2024 ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ದಿನಾಂಕ:09-02-2024 ರಂದು ದೂರು ನೀಡಿದರೂ, ಇಲ್ಲಿಯವರೆಗೆ ತನಿಖೆ ನಡೆಸದಿರಲು ಕಾರಣವೇನು? (ಸದರಿ ದೂರಿನ ಕಡತ ಹಾಗೂ ನಿರ್ವಹಿಸಿರುವ ಟಿಪ್ಪಣಿಯ ಪ್ರತಿ ನೀಡುವುದು) | ಎಲ್ಲಾ ಮುಂಬಡ್ತಿಗಳ ಬಗ್ಗೆ ಜಿಲ್ಲೆಗಳಿಂದ ಮಾಹಿತಿಯನ್ನು ಪಡೆಯಲಾಗುತ್ತಿದ್ದು, ಮಾಹಿತಿಯನ್ನು ಪರಿಶೀಲಿಸಿ ಕ್ರಮ ವಹಿಸಲಾಗುವುದು. |

ಸಂಖ್ಯೆ: ಗ್ರಾಅಪ 673 ಗ್ರಾಪಂಅ 2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.